## ಲೈಂಗಿಕ ಹಾಗೂ ವ್ಯಕ್ತಿಗಳಿಂದ ಹಿಂಸೆಗೆ ತುತ್ತಾದವರ ವಲಸೆ ಹಾಗೂ ವೀಸಾ ಮಾಹಿತಿ

ಅಂತರಾಷ್ಟ್ರೀಯ ವಿದ್ಯಾರ್ಥಿಗಳು ಮತ್ತು ತಜ್ಞರುಗಳಿಗೆ ತಮ್ಮ ವಲಸೆ ಮತ್ತು ವೀಸಾ ಸ್ಥಿತಿಯ ಬಗ್ಗೆ ವಲಸೆ ನ್ಯಾಯವಾದಿಗಳ ಸಹಾಯವನ್ನು ಕೇಳಬೇಕೆಂದು ಈ ಮೂಲಕ ಸಲಹೆ ನೀಡಲಾಗಿದೆ. ಈ ದಾಖಲೆಯು ಕಾನೂನಿನ ಕೆಲವು ವಿಷಯಗಳನ್ನು ವಿವರಿಸುವ ಸಂಪನ್ಮೂಲವಾಗಿದೆ, ಆದರೆ ಇದು ಕಾನೂನು ಸಲಹೆಗೆ ಬದಲಿ ಆಗಿರುವುದಿಲ್ಲ.

**ನಾನು ದೌರ್ಜನ್ಯಕ್ಕೆ ತುತ್ತಾದ ವ್ಯಕ್ತಿಯಾಗಿದ್ದು, ನನ್ನ ವಲಸೆಯ ಸ್ಥಿತಿಯು ನನ್ನ ಕ್ಯಾಂಪಸ್‌ನಲ್ಲಿನ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ನನ್ನ ಸಾಮರ್ಥ್ಯದ ಮೇಲೆ ಪ್ರಭಾವ ಬೀರುತ್ತದೆಯೇ?**

ಇಲ್ಲ. ಕಾನೂನಿನ ಅಡಿಯಲ್ಲಿ ಲೈಂಗಿಕ ಹಾಗೂ ವೈಯಕ್ತಿಕ ಹಿಂಸೆಗೆ ತುತ್ತಾಗಿರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯು ವಲಸೆ ಹಾಗೂ ವೀಸಾ ಸ್ಥಿತಿಯ ಪರಿಗಣನೆ ಇಲ್ಲದೇ 1972 ರ ಶಿಕ್ಷಣ ತಿದ್ದುಪಡಿಗಳು (ಶೀರ್ಷಿಕೆ IX) ಶೀರ್ಷಿಕೆ IX ಮತ್ತು ಸ್ತ್ರೀಯರ ಮೇಲಿನ ದೌರ್ಜನ್ಯ ತಡೆ ಕಾಯಿದೆಯ (VAWA) ಅಡಿಯಲ್ಲಿ ಅದೇ ಹಕ್ಕುಗಳನ್ನು ಹೊಂದಿರುತ್ತಾರೆ.

ಕ್ಯಾಂಪಸ್ಸಿನಲ್ಲಿಯ ವೈದ್ಯಕೀಯ ಮತ್ತು ಸಮಾಲೋಚನೆ ಸಂಪನ್ಮೂಲಗಳ ಬಗ್ಗೆ ಅಂತೆಯೇ ಲಭ್ಯವಿರುವ ವಸತಿ ಸೌಲಭ್ಯಗಳ ಮಾಹಿತಿಯನ್ನು ಇಲ್ಲಿ ಕಾಣಬಹುದು: https://www.tntech.edu/healthservices/

ವಿದ್ಯಾರ್ಥಿ ನಡವಳಿಕೆ ಪ್ರಕ್ರಿಯೆಯ ಬಗ್ಗೆ ಮಾಹಿತಿಯನ್ನು ಇಲ್ಲಿ ಕಾಣಬಹುದು: https://www.tntech.edu/policies/

ನೀವು ಅಪರಾಧವನ್ನು ವರದಿ ಮಾಡಿದ್ದಕ್ಕಾಗಿ ಕಾಲೇಜು ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳುವುದಿಲ್ಲ ಅಥವಾ ನಿಮ್ಮನ್ನು ಬೇರೆ ರೀತಿಯಲ್ಲಿ ನಡೆಸಿಕೊಳ್ಳುವುದಿಲ್ಲ.

**ದಾಖಲಿಸಲಾಗಿರುವ ಅಥವಾ ದಾಖಲಿಸಿಲ್ಲದ ವಲಸೆಗಾರನಾಗಿ ನಾನು ಆಪರಾಧಿಕ ಮೊಕದ್ದಮೆಗಳನ್ನು ಹೂಡಬಹುದೇ?**

ಹೌದು. ವಾರ್ಷಿಕ ಸುರಕ್ಷತೆಯ ವರದಿಯಲ್ಲಿ ನೀಡಿರುವ ನಿಮ್ಮ ರಾಜ್ಯದ ಅಪರಾಧಗಳ ವ್ಯಾಖ್ಯೆಗಳಲ್ಲಿ ಲೈಂಗಿಕ ದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ಡೇಟಿಂಗ್‌ನಲ್ಲಿ ಹಿಂಸೆ ಮತ್ತು ಹಿಂಬಾಲಿಸುವಂತಹ ವಿಚಾರಗಳ ಬಗ್ಗೆ ಮಾಹಿತಿ ಪಡೆಯಬಹುದು: https://www.tntech.edu/police/annual-security-report

ಮೊಕದ್ದಮೆ ಹೂಡುವ ಬಗ್ಗೆ ನಿರ್ದಿಷ್ಟ ಪ್ರಶ್ನೆಗಳನ್ನು ಇವರಿಗೆ ಕಳುಹಿಸಬಹುದು:

Zeva Edmondson, Title IX Office
1 William L. Jones Dr., Derryberry Hall 256, Cookeville, TN 38505
931-372-3112
https://www.tntech.edu/titleIX
zedmondson@tntech.edu

**ಅಪರಾಧದಲ್ಲಿ ಹಾನಿಗೊಳಗಾದವರಿಗೆ ನಿರ್ದಿಷ್ಟ ವೀಸಾ ಮತ್ತು ವಲಸೆ ಸ್ಥಿತಿಗಳು ಇರುತ್ತವೆಯೇ?**

ಹೌದು, ಲೈಂಗಿಕ ದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ಡೇಟಿಂಗ್‌ನಲ್ಲಿ ಹಿಂಸೆ ಮತ್ತು ಹಿಂಬಾಲಿಸುವಂತಹವುಗಳಿಗೆ ತುತ್ತಾದ ವ್ಯಕ್ತಿಗಳಿಗೆ U ಮತ್ತು T ವೀಸಾಗಳನ್ನು ಒಳಗೊಂಡು ಬೇರೆ ವೀಸಾ ಆಯ್ಕೆಗಳೂ ಕೂಡ ಇರಬಹುದು. ನಿರ್ದಿಷ್ಟ ಮಾಹಿತಿಗಾಗಿ ವಲಸೆ ವಕೀಲರನ್ನು ಸಂಪರ್ಕಿಸಿ.

| U ವೀಸಾ | T ವೀಸಾ |
|---|---|
| ಲೈಂಗಿಕ ದೌರ್ಜನ್ಯ, ಕೌಟುಂಬಿಕ ದೌರ್ಜನ್ಯ, ರೇಪ್, ಹಲ್ಲೆ ಅಥವಾ ಇತರ ಸಂಬಂಧಿಸಿದ ಅಪರಾಧಗಳನ್ನು ಒಳಗೊಂಡು ನಿಶ್ಚಿತ ಅಪರಾಧಿಕ ಚಟುವಟಿಕೆಯಿಂದಾಗಿ ದೈಹಿಕ ಅಥವಾ ಮಾನಸಿಕ ಹಿಂಸೆಗೆ ಒಳಗಾಗಿರುವ ವ್ಯಕ್ತಿಗಳಿಗಾಗಿ<br>- ತುತ್ತಾದ ವ್ಯಕ್ತಿ/ಅರ್ಜಿದಾರರು ಅರ್ಹವಾಗುವ ಅಪರಾಧದಲ್ಲಿ ಹಾನಿಗೆ ಒಳಗಾದವರು ಆಗಿರಬೇಕು ಮತ್ತು ಅಂತಹ ಅಪರಾಧ ಚಟುವಟಿಕೆಯ ತನಿಖೆ ಮತ್ತು/ಅಥವಾ ವಿಚಾರಣೆಯಲ್ಲಿ ನೆರವು ನೀಡುವ ಸಾಧ್ಯತೆ ಇರಬೇಕು<br>- ಸಾಮಾನ್ಯವಾಗಿ ನಾಲ್ಕು ವರ್ಷಗಳವರೆಗೆ ಸಿಂಧುವಾಗಿರುತ್ತದೆ<br>- ಹೆಚ್ಚಿನ ಮಾಹಿತಿಗಾಗಿ, ಒಬ್ಬ ವಲಸೆ ವಕೀಲರ ಸಲಹೆ ಪಡೆಯಿರಿ ಮತ್ತು ಇದನ್ನು ವೀಕ್ಷಿಸಿರಿ:<br><br>http://www.uscis.gov/humanitarian/victims-human-trafficking-other-crimes/victims-criminal-activity-u-nonimmigrant-status/victims-criminal-activity-u-nonimmigrant-status | ಮಾನವ ಕಳ್ಳಸಾಗಾಣಿಕೆಗೆ ತುತ್ತಾದವರಿಗಾಗಿ<br>- ಮಾನವ ಕಳ್ಳಸಾಗಾಣಿಕೆಯ ಚಟುವಟಿಕೆಯ ತನಿಖೆ ಅಥವಾ ವಿಚಾರಣೆಗಾಗಿ ಕಾನೂನು ಜಾರಿಯ ಸಕಾರಣ ವಿನಂತಿಗಳಿಗೆ ಬದ್ಧರಾಗಿರಬೇಕು (ದೈಹಿಕ ಅಥವಾ ಮನೋವೈಜ್ಞಾನಿಕ ನೋವುಗಳಿಂದಾಗಿ ಸಹಕಾರ ನೀಡಲು ಸಾಧ್ಯವಿಲ್ಲದೇ ಇರುವುದನ್ನು ಹೊರತುಪಡಿಸಿ) ಮತ್ತು ಯುನೈಟೆಡ್ ಸ್ಟೇಟ್ಸ್ ನಿಂದ ಹೊರಗೆ ಕಳುಹಿಸಿದಲ್ಲಿ ದೌರ್ಜನ್ಯಕ್ಕೆ ತುತ್ತಾದ ವ್ಯಕ್ತಿಯು ಅತ್ಯಂತ ಹೆಚ್ಚಿನ ಕಷ್ಟನಷ್ಟಗಳನ್ನು ಎದುರಿಸಬೇಕಾಗುತ್ತದೆ ಎನ್ನುವುದನ್ನು ಪ್ರದರ್ಶಿಸಲು ಸಾಧ್ಯವಿರಬೇಕು<br>- ಸಾಮಾನ್ಯವಾಗಿ ನಾಲ್ಕು ವರ್ಷಗಳವರೆಗೆ ಸಿಂಧುವಾಗಿರುತ್ತದೆ<br>- ಹೆಚ್ಚಿನ ಮಾಹಿತಿಗಾಗಿ, ಒಬ್ಬ ವಲಸೆ ವಕೀಲರ ಸಲಹೆ ಪಡೆಯಿರಿ ಮತ್ತು ಇದನ್ನು ವೀಕ್ಷಿಸಿರಿ:<br><br>http://www.uscis.gov/humanitarian/victims-human-trafficking-other-crimes/victims-human-trafficking-t-nonimmigrant-status |

**ನನಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವ ಯಾವುದೇ ಕಚೇರಿಯು ಕ್ಯಾಂಪಸ್ಸಿನಲ್ಲಿ ಇದೆಯೇ?**

,
, ,

The State University of New York

ವಲಸೆ ಸ್ಥಿತಿಯ ಬಗ್ಗೆ ಅಂತರಾಷ್ಟ್ರೀಯ ವಿದ್ಯಾರ್ಥಿ ಮತ್ತು ತಜ್ಞರ ಸೇವಾ ವಿಭಾಗದ ಕಚೇರಿಯು ಉಪಯುಕ್ತ ಮಾಹಿತಿಯನ್ನು ನೀಡಬಹುದು. ಬೇರೆ ವೀಸಾ ಸ್ಥಿತಿಗಳ ಕುರಿತು ಬದಲಾವಣೆಗಳು ಅಥವಾ ಪ್ರಮಾಣಿತ F-1 ಮತ್ತು J-1 ವಿದ್ಯಾರ್ಥಿ ವೀಸಾಗಳ ಹೊರತಾಗಿರುವ ಕಾನೂನು ಆಯ್ಕೆಗಳು ಅಥವಾ ಉದ್ಯೋಗದಾತ ಸಂಸ್ಥೆಯ ಪ್ರಾಯೋಜಿತ ಕೆಲಸದ ವೀಸಾಗಳ ಬಗ್ಗೆ ತಿಳಿಯಲು ನೀವು ಅರ್ಹ ವಲಸೆ ವಕೀಲರ ಜೊತೆ ಸಮಾಲೋಚಿಸಬೇಕು ಎನ್ನುವುದನ್ನು ನೆನಪಿನಲ್ಲಿಡಿ.

| **ವೀಸಾ ಆಯ್ಕೆಗಳು** | |
|---|---|
| F-1 ಮತ್ತು J-1 ಸ್ಥಿತಿಯ ವಿದ್ಯಾರ್ಥಿಗಳು<br>• ಲೈಸನ್ಸ್ ಹೊಂದಿರುವ ಡಾಕ್ಟರ್, ಒಸ್ಟಿಯೋಪತಿಯ ಡಾಕ್ಟರ್ ಅಥವಾ ಲೈಸನ್ಸ್ ಹೊಂದಿರುವ ಕ್ಲಿನಿಕಲ್ ಸೈಕಾಲೊಜಿಸ್ಟ್ ಗಳು ದೃಢೀಕರಿಸಿದ ವೈದ್ಯಕೀಯ ಸ್ಥಿತಿಗಳಿಂದಾಗಿ ಕೆಳದರ್ಜೆಗೆ ಇಳಿಸಿದ ಕೋರ್ಸ್-ಲೋಡ್ ಅನುಮೋದನೆಯು ಬಾಕಿಯಿರುವುದಕ್ಕಾಗಿನ ಆಯ್ಕೆಗಳು<br>• ನಿಮ್ಮ ಶೈಕ್ಷಣಿಕ ಕಾರ್ಯಕ್ರಮದಿಂದ ಕಲಿಕೆಯ ಕ್ರಮಕ್ಕೆ, ಹಿಂತೆಗೆದುಕೊಳ್ಳುವುದಕ್ಕೆ ಇರುವ ಆಯ್ಕೆಗಳು ಮತ್ತು ಇದಕ್ಕಿರುವ ಸಮಸ್ಯೆಗಳು<br>• ನಂತರ ದಿನದಂದು ಕಲಿಕೆಯ ಕ್ರಮಕ್ಕೆ ಹಿಂತಿರುಗುವ ಕುರಿತು ಮಾಹಿತಿ, ವಿದ್ಯಾರ್ಥಿಯು ಹಿಂತೆಗೆದುಕೊಳ್ಳುವುದನ್ನು ಆಯ್ಕೆ ಮಾಡಿಕೊಂಡಲ್ಲಿ.<br>• ಜೊತೆಗೆ ಬರುವ ಸಂಗಾತಿಗಳ ಬಗೆಗಿನ ಆಯ್ಕೆಗಳು ಮತ್ತು ಸಮಸ್ಯೆಗಳು<br>• ವೀಸಾ ಸ್ಥಿತಿ ಬದಲಾಯಿಸುವ ಆಯ್ಕೆಯ ಕುರಿತು ಸಾಮಾನ್ಯ ಮಾಹಿತಿ.<br>• U ಮತ್ತು T ವೀಸಾಗಳ ಕುರಿತು ಸಾಮಾನ್ಯ ಮಾಹಿತಿ. (ಅರ್ಹ ವಲಸೆ ವಕೀಲರಿಗೆ ಉಲ್ಲೇಖ )<br>• ಅರ್ಹ ವಕೀಲರಿಗೆ ಉಲ್ಲೇಖ | H-1B, O-1, E-3, ಅಥವಾ TN ಉದ್ಯೋಗಿಗಳಿಗೆ<br>• ಕೆಲಸದ ರಜೆಯ ಗೈರುಹಾಜರಿಗೆ ಆಯ್ಕೆಗಳು ಮತ್ತು ನಿಮ್ಮ ವಲಸೆ ಸ್ಥಿತಿಗೆ ಇರುವ ಸಮಸ್ಯೆಗಳು<br>• ಜೊತೆಗೆ ಬರುವ ಸಂಗಾತಿಗಳ ಬಗೆಗಿನ ಆಯ್ಕೆಗಳು ಮತ್ತು ಸಮಸ್ಯೆಗಳು<br>• ವೀಸಾ ಸ್ಥಿತಿ ಬದಲಾಯಿಸುವ ಆಯ್ಕೆಯ ಕುರಿತು ಸಾಮಾನ್ಯ ಮಾಹಿತಿ. ಅರ್ಹ ವಲಸೆ ವಕೀಲರಿಗೆ ಉಲ್ಲೇಖ<br>• U ಮತ್ತು T ವೀಸಾಗಳ ಕುರಿತು ಸಾಮಾನ್ಯ ಮಾಹಿತಿ. (ಅರ್ಹ ವಲಸೆ ವಕೀಲರಿಗೆ ಉಲ್ಲೇಖ )<br>• ಅರ್ಹ ವಲಸೆ ವಕೀಲರಿಗೆ ಉಲ್ಲೇಖ<br>• ಬಾಕಿಯಿರುವ ಯುಎಸ್ ಖಾಯಂ ನಿವಾಸಿಗರು (ಗ್ರೀನ್ ಕಾರ್ಡ್ ಅನುಮೋದನೆಯನ್ನು ಇನ್ನೂ ಹೊಂದಿಲ್ಲದೇ ಇರುವವರು)<br>• ನಿಮ್ಮ ಬಾಕಿಯಿರುವ ಉದ್ಯೋಗದಾತ ಸಂಸ್ಥೆಯಿಂದ ಪ್ರಾಯೋಜಿಸಲ್ಪಟ್ಟ ಖಾಯಂ ನಿವಾಸಿಯ ಅರ್ಜಿಯ ಮೇಲೆ ನೀವು ಉದ್ಯೋಗವನ್ನು ಬಿಡುವುದರ ಮೇಲಿನ ಪರಿಣಾಮ;<br>• ಅರ್ಹ ವಕೀಲರಿಗೆ ಉಲ್ಲೇಖ |

**ವಲಸೆ ವಕೀಲ ಎಂದರೆ ಯಾರು ಮತ್ತು ಅವರು ಏನು ಮಾಡುತ್ತಾರೆ?**

ವಲಸೆ ವಕೀಲ ಎಂದರೆ ವಲಸೆ ಕಾನೂನುಗಳ ಕ್ಷೇತ್ರದಲ್ಲಿ ತಜ್ಞತೆ ಹೊಂದಿರುವ ಲೈಸನ್ಸ್ ಪಡೆದಿರುವ ನ್ಯಾಯವಾದಿಗಳು. ಅವರು ತಮ್ಮ ಕಕ್ಷಿದಾರರ ವಕೀಲರಂತೆ ಕೆಲಸ ಮಾಡುತ್ತಾರೆ ಮತ್ತು ಅವರು ವಲಸೆ ಪ್ರಾಧಿಕಾರಗಳ ಮುಂದೆ ತಮ್ಮ ಕಕ್ಷಿದಾರರ ಪರವಾಗಿ ವಲಸೆ ನ್ಯಾಯಾಲಯಗಳಲ್ಲಿ ಅಂತೆಯೇ ವಲಸೆ ಪ್ರಯೋಜನಗಳಲ್ಲಿ ಅರ್ಜಿಯನ್ನು ತುಂಬುವುದಕ್ಕಾಗಿ ಹಾಜರಾಗಬಹುದು. ನ್ಯಾಯವಾದಿಗಳು ಸಾಮಾನ್ಯ ಸಲಹೆಯನ್ನು ನೀಡಬಹುದು ಮತ್ತು ವಲಸೆಯ ಆಯ್ಕೆಗಳನ್ನು ಚರ್ಚಿಸಬಹುದು. ಎಲ್ಲ ನ್ಯಾಯವಾದಿಗಳಂತೆಯೇ ವಲಸೆ ನ್ಯಾಯವಾದಿಗಳೂ ವೃತ್ತಿಪರ ನೈತಿಕ ಹಾಗೂ ಕಾನೂನು ಅಗತ್ಯತೆಗಳಿಗೆ ಬಾಧ್ಯಸ್ಥರಾಗಿರುತ್ತಾರೆ ಮತ್ತು ಕಕ್ಷಿದಾರರ ಚರ್ಚೆಗಳನ್ನು ಗೌಪ್ಯವಾಗಿ ಉಳಿಸಿಕೊಳ್ಳುತ್ತಾರೆ.

**ನಾನು ಸ್ಥಳೀಯ ವಲಸೆ ವಕೀಲರನ್ನು ಎಲ್ಲಿ ಕಂಡುಕೊಳ್ಳಬಹುದು?**

| |
|---|
| ಯುಎಸ್ ನಾಗರಿಕತ್ವ ಮತ್ತು ವಲಸೆ ಸೇವೆಗಳು (USCIS), ಬ್ಯೂರೋ ಆಫ್ ಡಿಪಾರ್ಟ್‌ಮೆಂಟ್ ಆಫ್ ಹೋಮ್‌ಲ್ಯಾಂಡ್ ಸೆಕ್ಯುರಿಟಿ (DHS) ಗಳು ಮುಕ್ತ ಹಾಗೂ ಕಡಿಮೆ ಖರ್ಚಿನ ಕಾನೂನು ಪ್ರಾತಿನಿಧಿತ್ವವನ್ನು ಪಡೆಯಲು ವ್ಯಕ್ತಿಗಳಿಗೆ ನೆರವಾಗಲೆಂದು ಎರಡು ಸೈಟ್(ತಾಣ) ಗಳನ್ನು ಒದಗಿಸುತ್ತವೆ.<br><br>USCIS: ನಿಮ್ಮ ಸಮುದಾಯದ ವೆಬ್‌ಪುಟದಲ್ಲಿ ಸಹಾಯ ಕಂಡುಕೊಳ್ಳಿ USCIS: ಕಾನೂನು ಸೇವೆಗಳು ವೆಬ್‌ಪುಟ ಕಂಡುಕೊಳ್ಳಿ |
| ದಿ ಬೋರ್ಡ್ ಆಫ್ ಇಮ್ಮಿಗ್ರೇಶನ್ ಅಪೀಲ್ಸ್ (BIA) ರಾಜ್ಯವಾರು ವಕೀಲರುಗಳ ಪಟ್ಟಿಯನ್ನು ಒದಗಿಸುತ್ತದೆ, ಇವರು ನಿಮಗೆ ಉಚಿತವಾಗಿ ಇಲ್ಲವೇ ಸ್ವಲ್ಪ ಖರ್ಚಿನೊಂದಿಗೆ ವಲಸೆ ಸೇವೆಗಳನ್ನು ಒದಗಿಸುತ್ತಾರೆ. |
| ಅಮೇರಿಕನ್ ಇಮ್ಮಿಗ್ರೇಶನ್ ಲಾಯರ್ಸ್ ಅಸೋಸಿಯೇಶನ್ (AILA) ನಿಮಗೆ ಆನ್‌ಲೈನ್ ವಲಸೆ ವಕೀಲರ ಉಲ್ಲೇಖ ಸೇವೆ ಒದಗಿಸುತ್ತಿದ್ದು, ಇವರು ವಿದ್ಯಾರ್ಥಿ ಅಥವಾ ತಜ್ಞರಿಗೆ ವಲಸೆ ವಕೀಲರನ್ನು ಕಂಡುಕೊಳ್ಳಲು ನೆರವಾಗಬಹುದು. |
| ಅಮೇರಿಕನ್ ಬಾರ್ ಅಸೋಸಿಯೇಶನ್ ಕೂಡ ರಾಜ್ಯವಾರು ಕಾನೂನು ಸೇವೆಗಳನ್ನು ಕಂಡುಕೊಳ್ಳುವುದಕ್ಕೆ ಅಗತ್ಯವಿರುವ ಮಾಹಿತಿಯನ್ನು ಒದಗಿಸುತ್ತದೆ. |

The State University of New York